ಮೈಸೂರಿನಲ್ಲಿ ಕಳೆದ ಓದಿನ ದಿನಗಳ ನೆನಪು ಮರೆಯಾಗಲು ಬಹಳ ದಿನ ಹಿಡಿಯಲಿಲ್ಲ.

ಎಂದಿನಂತೆ ಕಚೇರಿಗೆ ಬಂದಾಗ ನನ್ನ ಟೇಬಲ್ಲಿನ ಮೇಲೆ ಒಂದು ಪತ್ರ ಇತ್ತು. ನನ್ನ ಹೆಸರು, ಕಚೇರಿಯ ವಿಳಾಸ, ಜೊತೆಗೆ ಕಳಿಸಿದವರ ಹೆಸರು ಯಶಾ, ಮೈಸೂರು ಎಂದಷ್ಟೇ ಇತ್ತು. ಬರೆದವರು ಯಾರು ಎಂಬುದು ಗೊತ್ತಾಗಲಿಲ್ಲ. ಲಗುಬಗೆಯಿಂದ ಕವರ್ ಒಡೆದು ಪತ್ರ ಬಿಚ್ಚಿದೆ. ಎರಡು ಟೂರಿಸ್ಟ್ ಬಸ್ಸಿನ ಟಿಕೆಟ್‌ಗಳಿದ್ದವು.

'ನಮಸ್ಕಾರ... ನಾನು ನಿಮ್ಮ ಜೊತೆಗೆ ಓದಿನ ಒಂದೆರಡು ದಿನಗಳನ್ನು ವಿಶ್ವವಿದ್ಯಾಲಯದಲ್ಲಿ ಕಳೆದಿದ್ದು ನಿಮಗೆ ನೆನಪಿರಬಹುದು. ನಿಮ್ಮ ಸ್ನೇಹ ಪ್ರೀತಿ ವಿಶ್ವಾಸಗಳ ಆ ಪಾಠಗಳಲ್ಲಿ, ನಾನು, ನೀವು, ಕ್ಯಾಂಟೀನ್, ಲೈಬ್ರರಿ, ಮರದ ಕೆಳಗೆ ಪಾಠಗಳ ಚರ್ಚೆ, ಸರ್ ಅವರು ತಮ್ಮ ಕೋಣೆಯಲ್ಲಿ ತೆಗೆದುಕೊಂಡ ಕ್ಲಾಸು ಇವುಗಳಲ್ಲಿ ಕಳೆದ ಕೆಲವೇ ದಿನಗಳು ನನಗಂತೂ ನೆನಪಿವೆ. ನಿಮಗೂ ನೆನಪಿರಬೇಕು. ನಮಗೆ ಅಕಸ್ಮಾತ್ತಾಗಿ ಒಂದು ದಿನದ ರಜೆಯನ್ನು ನಿಮ್ಮ ಜೊತೆ ಕಳೆಯಲು ನಾನು ಅರಮನೆ, ಚಾಮುಂಡಿ ಬೆಟ್ಟ ನೋಡಬೇಕೆಂದು ಎರಡು ಟೂರಿಸ್ಟ್ ಬಸ್ ಟಿಕೆಟ್ ಪಡೆದು ಬೆಳಗ್ಗೆ ತಮಗೆ ಕೆ.ಆರ್. ಸರ್ಕಲ್ಲಿಗೆ ಬರಲು ಹೇಳಿದ್ದೆ. ನಾನು ನಿಮಗಾಗಿ ಬಹಳ ಹೊತ್ತು ಕಾದೆ. ನೀವು ಯಾಕೆ ಬರಲಿಲ್ಲ? ನನ್ನ ಬಗ್ಗೆ ಏನಾದರೂ ತಪ್ಪು ತಿಳಿವಳಿಕೆ ಆಯಿತೋ ಏನೋ? ಮನಸ್ಸು ನೊಂದಿತು. ಎಲ್ಲಿಂದಲೋ ಬಂದು ಯಾರೆಲ್ಲ ಪರಿಚಿತರಾಗುತ್ತಾರೆ, ಪರಿಚಿತರಾಗುವುದರೊಳಗಾಗಿ ಮರೆಯಾಗುತ್ತಾರೆ. ಹೀಗೇ ಏನೋ ವಿಚಾರಗಳಿಂದ ಮನಸ್ಸಿಗೆ ನೋವಾಯಿತು.

ನಾನು ನಿಮ್ಮ ರೋಲ್ ನಂಬರಿನಿಂದ ಇನ್‌ಸ್ಟಿಟ್ಯೂಟ್‌ನಲ್ಲಿ ನಿಮ್ಮ ವಿಳಾಸ ಪಡೆದು ಈ ಪತ್ರ ಬರೆದಿದ್ದೇನೆ. ಜೊತೆಗೆ ನಮ್ಮಿಬ್ಬರನ್ನು ಅಗಲಿಸಿದ ಟೂರಿಸ್ಟ್ ಬಸ್ಸಿನ ಎರಡೂ ಟಿಕೆಟುಗಳನ್ನು ಕಳಿಸಿರುವೆ. ನಾನು ಬೇಕಂತಲೇ ನನ್ನ ನಿಜವಾದ ಹೆಸರು ವಿಳಾಸವನ್ನು ಬರೆದಿಲ್ಲ. ನಾನು ಅಪರಿಚಿತಳಂತೆ ಮೈಸೂರಿಗೆ ಬಂದಿದ್ದೆ. ಅಪರಿಚಿತಳಾಗಿಯೇ ಪರಿಚಿತ ನೆನಪುಗಳೊಂದಿಗೆ ತಿರುಗಿ ನನ್ನ ಊರಿಗೆ ಮರಳಿದ್ದೇನೆ. ಪರಿಚಿತರಾಗುವುದಕ್ಕಿಂತ ಅಪರಿಚಿತರಾಗಿ ಪರಿಚಿತ ನೆನಪುಗಳಲ್ಲಿ ಇರುವುದರಲ್ಲಿಯೇ ಹಿತವಿದೆ, ಅಲ್ಲವೆ?'

ಓದಿ ಮುಗಿಸಿದ ನನ್ನ ಕಣ್ಣುಗಳು ತೇವಗೊಂಡವು. ಕುದುರಬಹುದಾದ ಸ್ನೇಹವೊಂದನ್ನು ಮೂರ್ಖತನದಿಂದ ಬಿಟ್ಟುಕೊಟ್ಟಿದ್ದೆ. ನನ್ನ ಪೂರ್ವಗ್ರಹ ಪೀಡಿತ ಮನಸ್ಸಿನಲ್ಲಿ ಸಹಪಾಠಿ ನೆನಪಾಗಿ ಉಳಿಯಲಿದ್ದಳು. ಆಕೆಯ ಪ್ರೀತಿ ವಿಶ್ವಾಸಗಳಿಗೆ ಯೋಗ್ಯನಲ್ಲದ ನನ್ನ ಕಣ್ಣುಗಳಿದ ನಾಲ್ಕು ಹನಿಗಳು ಉದುರಿದವು.


### ಜಿ.ಎಂ. ಶಿರಹಟ್ಟಿ

ಪ್ರಸಾರ ಮಾಧ್ಯಮದಲ್ಲಿ ಚಿರಪರಿಚಿತ ಹೆಸರು. ಕಳೆದ ನಾಲ್ಕು ದಶಕಗಳಿಂದ ಪ್ರಸಾರ ಮಾಧ್ಯಮದ ಅನೇಕ ಪ್ರಯೋಗಗಳಿಂದಾಗಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದಿದ್ದಾರೆ. 'ಸೂಡಮಂಜರಿ', 'ಚಿಮಣಾ', 'ಮರೆತ ಪುಟಗಳು', 'ಬೀಳಲಿರುವ ಹನಿಗಳು', 'ಗಡಿಯಾರ ಇರದಿದ್ದಾಗ' ಮುಂತಾದ ಕಾರ್ಯಕ್ರಮಗಳಿಗೆ ಸಿ.ಬಿ.ಎ. ಅಬು, ಸಾರ್ಕ, ಯ್‌ಡಬ್ಲ್ಯ ಮುಂತಾದ ಅಂತರರಾಷ್ಟ್ರೀಯ ಪ್ರಶಸ್ತಿಗಳು ಬಂದಿವೆ. ಅವರ ಪುಸ್ತಕಗಳು: 'ಚೇತನ ಚಿಲುಮೆ', 'The last migration', 'ಯಾತ್ರೆ', 'God it is Radio – ಮಕ್ಕಳ ನಾಟಕ'.